## ಪ್ರಬಂಧ

ಜಿ.ವಿ. ಆನಂದಮೂರ್ತಿ



ನನಗೆ ಮೈಮರೆಸುವಷ್ಟು ಸಂತೋಷವನ್ನು ಸೃಷ್ಟಿಸುತ್ತಿದ್ದ ಆನಂದದ ಸ್ಥಳವೆಂದರೆ ನನ್ನ ಹಳ್ಳಿಯೆ. ನನ್ನೊಳಗಿರುವ ಕೇರಿಯನ್ನು ಒಮ್ಮೆ ಇಣುಕಿ ನೋಡಿದರೆ, ನನ್ನ ಕೇರಿಯ ಇತಿಹಾಸ, ನನ್ನ ವೈಯಕ್ತಿಕ ಬದುಕಿನ ಘಟನೆಗಳು ತೆರೆಗಳಂತೆ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ನಾನು ನೋಡಿದಂತೆ, ಯಂತ್ರಗಳು ಮತ್ತು ವಿದ್ಯುಚ್ಛಕ್ತಿಯ ಮುಖವನ್ನೇ ಕಾಣದ ನಮ್ಮೂರು ನೂರಾರು ವರುಷಗಳ ಕಾಲ ಬಾಳಿ ಬದುಕಿದ್ದು, ಪರಸ್ಪರ ಸಹಕಾರ ಮತ್ತು ಹೊಂದಾಣಿಕೆಯ ಸಮೀಕರಣದ ಮೂಲಕ. ಇವೆಲ್ಲವೂ ನಮ್ಮ ಕೇರಿಯ ಪ್ರಾಚೀನ ಬದುಕಿನಲ್ಲಿದ್ದ ಸಾಮರಸ್ಯ ಹಾಗೂ ಸಮಗ್ರತೆಯ ಸೌಂದರ್ಯವನ್ನು ಹೊರಸೂಸುತ್ತವೆ. ಬಾಲ್ಯದಲ್ಲಿ ನಾನು ಕಂಡ ಜಗತ್ತೇ ನನ್ನನ್ನು ಇಂದಿಗೂ ಭಾವನಾತ್ಮಕವಾಗಿ ಪೋಷಿಸುತ್ತಿದೆ.

ಒಂದು ಬಗೆಯ ಸಮ್ಮಿಶ್ರ ಸಂಸ್ಕೃತಿಯೊಂದಿಗೆ ಬೆಸೆದುಕೊಂಡ ಹಳ್ಳಿ ನಮ್ಮದು. ನಾನಾ ಬಗೆಯ